# ಎನ್‌ಐಟಿಕೆಯಲ್ಲಿ ಭಾರೀ ಸಂಭ್ರಮ

ಸುರತ್ಕಲ್, ಸೆ. 3: ಎನ್‌ಐಟಿಕೆಯ 2004ರ ಬ್ಯಾಚ್‌ನ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಸುಹಾಸ್ ಯತಿರಾಜ್ ಅವರ ಪ್ಯಾರಾಲಿಂಪಿಕ್ಸ್ ಪದಕ ಸಾಧನೆಗೆ ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಸಂಭ್ರಮಾಚರಣೆ ನಡೆಯಿತು. ಟೋಕಿಯೊ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗಳೆರಡರಲ್ಲೂ ಪದಕಗಳನ್ನು ಗೆದ್ದ ಮೊದಲ ಭಾರತೀಯ ಬ್ಯಾಡ್ಮಿಂಟನ್ ಆಟಗಾರನಾಗಿ ಮೂಡಿಬಂದ ಹೆಗ್ಗಳಿಕೆ ಸುಹಾಸ್ ಅವರದು. ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ನಿರ್ದೇಶಕರು, ಡೀನ್, ಉಪನ್ಯಾಸಕರು, ವಿದ್ಯಾರ್ಥಿಗಳೆಲ್ಲ ಸೇರಿ ಸಂಭ್ರಮಿಸಿದರು.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ಎಸ್‌ಎಲ್4 ಬ್ಯಾಡ್ಮಿಂಟನ್‌ನಲ್ಲಿ ಸುಹಾಸ್ ಯತಿರಾಜ್ ಬೆಳ್ಳಿ ಪದಕ ಜಯಿಸಿದರು.

Udayavani, Date: 04/09/24, p. no-02